ವಿಷಯ: ಪ್ರತಿ ತಾಲ್ಲೂಕಿನಲ್ಲಿ ಸಾಮಾನ್ಯ ಚಾಕಿ ಕೇಂದ್ರಗಳ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1347 (1858)

ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗಾ) ಮಾನ್ಯ ರೇಷ್ಮೆ, ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ರೇಷ್ಮೆ ಬೆಳೆಗಾರರ ಅನುಕೂಲಕ್ಕೆ, ಪ್ರತಿ ತಾಲ್ಲೂಕಿನಲ್ಲಿ ಚಾಕಿ ಕೇಂದ್ರಗಳನ್ನು ಒದಗಿಸಲು ಆಲೋಚಿಸುತ್ತಿದೆಯೆ ?

ಆ) ಹಾಗಿದ್ದಲ್ಲಿ ಯಾವಾಗಿನಿಂದ ?

ಶ್ರೀ ವಿ. ಮುನಿಯಪ್ಪ (ರೇಷ್ಮೆ, ಕೃಷಿ ರಾಜ್ಯ ಸಚಿವರು)

ಅ) ಸರ್ಕಾರದ ವತಿಯಿಂದ ಬಿತ್ತನೆ ವಲಯದಲ್ಲಿ ಹೊಸ ಚಾಕಿ ಕೇಂದ್ರ ತೆರೆಯುವ ಕಾರ್ಯವಿದೆ. ಬೇರೆ ಕೇಂದ್ರದಲ್ಲಿ ಖಾಸಗಿಯವರು ಚಾಕಿ ಸಾಕಣೆ ಕೇಂದ್ರಗಳನ್ನು ತೆರೆಯಲು ಮುಂದೆ ಬಂದರೆ ಅಂಥವರಿಗೆ ಸರ್ಕಾರ ಪ್ರೋತ್ಸಾಹ ನೀಡುತ್ತದೆ.

ಆ) ಚಾಲ್ತಿಯಲ್ಲಿದೆ.

ವಿಷಯ:ರಾಜ್ಯದಲ್ಲಿನ ವಿವಿಧ ಗಣಿಗಳಲ್ಲಿ ಉತ್ಪಾದಿಸಲಾದ ಚಿನ್ನದ ಪ್ರಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1348 (1859)

ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗಾ) ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. 1990-91ಮತ್ತು 1991-92ನೇ ಸಾಲಿನಲ್ಲಿ ರಾಜ್ಯದಲ್ಲಿನ ವಿವಿಧ ಗಣಿಗಳಲ್ಲಿ ಉತ್ಪಾದಿಸಲಾದ ಚಿನ್ನವೆಷ್ಟು ? (ಗುತ್ತಿಗೆವಾರು ವಿವರಣೆ ಕೊಡಿ)
2. ಒಂದು ಗ್ರಾಂ ಚಿನ್ನ ತೆಗೆಯಲು ಎಷ್ಟು ವೆಚ್ಚ ತಗಲುತ್ತದೆ ?
3. ಚಿನ್ನವನ್ನು ತೆಗೆಯಲು ಸಾಧ್ಯವಿರುವ ಬೇರೆ ಸ್ಥಳಗಳು ರಾಜ್ಯದಲ್ಲಿ ಇವೆಯೇ ?

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

1. ಮೆಸರ್ಸ್ ಹಟ್ಟಿ ಗೋಲ್ಡ್ ಮೈನ್ಸ್ ಎಂ. ಎಲ್. ನಂ. 1305 ಮಂಗಳೂರು ಮೈನ್ಸ್, (ಗುಲ್ಬರ್ಗ ಜಿಲ್ಲೆ)

1990-91 (ಫೆಬ್ರವರಿ 92ರವರೆಗೆ)	1991-92
30.90 ಕೆ.ಜಿ.	14.49ಕೆ.ಜಿ

2. ಮೆ:ಹಟ್ಟಿ ಗೋಲ್ಡ್‌ಮೈನ್ಸ್ ಎಂ. ಎಲ್. ನಂ. 1734 ಹಟ್ಟಿ ಗಣಿ(ರಾಯಚೂರು ಜಿಲ್ಲೆ)

1990-91	1991-92
885.12ಕೆ.ಜಿ.	992.09 ಕೆ. ಜಿ

3. ಮೆ:ಭಾರತ್‌ಗೋಲ್ಡ್‌ಮೈನ್ಸ್ ಎಂ. ಎಲ್. ನಂ. 1154 ನಂದಿ ದುರ್ಗ ಮತ್ತು ಚಾಂಪಿಯನ್ ರೀಫ್ ಕೆ.ಜಿ.ಎಫ್. ಕೋಲಾರ ಜಿಲ್ಲೆ.

1990-91	1991-92
404.49ಕೆ.ಜಿ	249.46 ಕೆ. ಜಿ.

2. ಹಟ್ಟಿ ಚಿನ್ನದ ಗಣಿಯಲ್ಲಿ 90-91ರ ವರ್ಷದಲ್ಲಿ ಒಂದು ಗ್ರಾಂ ಚಿನ್ನವನ್ನು ಉತ್ಪಾದಿಸಲು ತಗಲುವ ವೆಚ್ಚ ರೂ. 246.00 ಇರುತ್ತದೆ. ಇದೇ ವೆಚ್ಚ 1991-92ರ ವರ್ಷಕ್ಕೆ ಎಷ್ಟು ಎಂಬುದನ್ನು ವರ್ಷ

ಮುಗಿದ ನಂತರ ಗೊತ್ತಾಗುತ್ತದೆ. ಭಾರತ ಚಿನ್ನದ ಗಣಿಯಲ್ಲಿನ ವೆಚ್ಚದ ವಿವರಗಳು ನಮ್ಮಲ್ಲಿ ಸಧ್ಯ ಲಭ್ಯವಿಲ್ಲ.

3. ರಾಜ್ಯದಲ್ಲಿ ಕೆಲವು ಸ್ಥಳಗಳು ಇವೆ. ಅವುಗಳಲ್ಲಿ ಕೆಲವು ಪ್ರಮುಖ ಸ್ಥಳಗಳನ್ನು ಕೆಳಗೆ ಕೊಡಲಾಗಿದೆ.

1.ಮೆ:ಹಟ್ಟಿಗೊಲ್ಡ್‌ಮೈನ್ಸ್
ಎಂ.ಎಲ್.ನಂ. 2031
ವಂದಲಿ ಗ್ರಾಮ ದೇವದುರ್ಗ
ರಾಯಚೂರು ಜಿಲ್ಲೆ ಕೆಲಸ ಆರಂಭಿಸಿಲ್ಲ.

2.ಮೆ:ಹಟ್ಟಿ ಗೋಲ್ಡ್ ಮೈನ್ಸ್
ಎಂ.ಎಲ್.ನಂ. 2126,
ಊಟಿ ಗ್ರಾಮ, ರಾಯಚೂರು
ಜಿಲ್ಲೆ ದೇವದುರ್ಗತಾ: ಕೆಲಸ ಆರಂಭಿಸಿಲ್ಲ.

3.ಮೆ:ಮೈಸೂರು ಮೈನ್ಸ್	ಗದಗ್ ಗೋಲ್ಡ್ ಫೀಲ್ಡ್, ಮಹಾಲಿಂಗಪುರ ಶಿರಹಟ್ಟಿ ತಾ: ಧಾರವಾಡ ಜಿಲ್ಲೆ.
4.ಮೆ:ಸಾಂಗಲಿ ಮೈನ್ಸ್	ಗದಗ್ ಗೋಲ್ಡ್ ಫೀಲ್ಡ್ ಶಿರಹಟ್ಟಿ, ತಾ:ಧಾರವಾಡ ಜಿಲ್ಲೆ.
5.ಮೆ:ಕೆಂಪಿನಕೋಟೆ	ಹಾಸನ ಜಿಲ್ಲೆ
6.ಮೆ :ಅಜ್ಜನಹಳ್ಳಿ	ಸಿರಾ ತಾಲ್ಲೂಕ್, ತುಮಕೂರು ಜಿಲ್ಲೆ.

ವಿಷಯ:ರಾಜ್ಯದಲ್ಲಿ ಹಲವಾರು ಆಸ್ಪತ್ರೆಗಳನ್ನು ಮೇಲ್ದರ್ಜೆಗೊಳಿಸಲು ಸರ್ಕಾರವು ವಿಶ್ವ ಬ್ಯಾಂಕಿನಿಂದ ನೆರವು ಪಡೆಯುವ ಬಗ್ಗೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 1349 (1860)

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹಲವಾರು ಆಸ್ಪತ್ರೆಗಳನ್ನು ಮೇಲ್ದರ್ಜೆಗೊಳಿಸಲು ಸರ್ಕಾರವು ವಿಶ್ವ ಬ್ಯಾಂಕಿನಿಂದ ನೆರವನ್ನೇನಾದರೂ ಪಡೆಯುತ್ತಿದೆಯೇ ?

ಆ) ಹಾಗಿದ್ದಲ್ಲಿ ಗುರ್ತಿಸಲಾದ ಆಸ್ಪತ್ರೆಗಳಾವುವು ?

ಇ) ಈ ಆಸ್ಪತ್ರೆಗಳಿಗೆ ಸೌಕರ್ಯಗಳನ್ನು ಯಾವಾಗ ಒದಗಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.